



ಚಿತ್ರಗಳು: ಪ್ರಜಾವಾಣಿ ಸಂಗ್ರಹ

ಮಿಶ್ರ ಮಾಧ್ಯಮ, ಗ್ರಾಫಿಕ್ಸ್ – ಹೀಗೆ, ಹಲವು ಚಿತ್ರಶೈಲಿಗಳ ಕಲಾಕೃತಿಗಳು ನೆರೆಯುವ ಸ್ಥಳವೇ ಚಿತ್ರಸಂತೆ. ಈ ಸಂತೆಯೀಗ ಬೆಂಗಳೂರಿನ ಸಾಂಸ್ಕೃತಿಕ ಲೋಕದ ಹೆಗ್ಗುರುತೂ ಹೌದು.

ದಕ್ಷಿಣ ಮುಂಬೈನ ಕಾಲಾಪೋಡಾ ಮೈದಾನದಲ್ಲಿ ನಡೆಯುವ ಸಂತೆ, ಪಶ್ಚಿಮ ಬಂಗಾಳದ ಶಾಂತಿನಿಕೇತನದ ಆವರಣದಲ್ಲಿ ನಡೆಯುವ ನಂದಲಾಲ್ ಮೇಳಗಳನ್ನು ಹೊರತುಪಡಿಸಿದರೆ, ರಸ್ತೆಯ ಇಕ್ಕೆಲಗಳಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ನಡೆಯುವುದು ಬೆಂಗಳೂರಿನ ಚಿತ್ರಸಂತೆ ಮಾತ್ರ.

ಹಳ್ಳಿಗಾಡಿನ ಭೂದೃಶ್ಯಗಳು, ನಿಸರ್ಗದ ನೈಜಚಿತ್ರಣ, ಗ್ರಾಮೀಣ ಭಾಗದ ವಿವಿಧ ಮುಖಗಳು, ಅಮೂರ್ತ ಕಲೆ, ಪಾಶ್ಚಿಮಾತ್ಯ ಕಲೆ, ತೊಗಲುಗೊಂಬೆ ಮೇಲಿನ ಚಿತ್ರಗಳು – ಹಳತು ಮತ್ತು ಹೊಸತರ ಸಂಗಮದಂತಿರುವ ಚಿತ್ರಸಂತೆ ಬಯಲು ಚಿತ್ರಶಾಲೆಯೂ ಹೌದು. ದೇಶವಿದೇಶಗಳಲ್ಲೂ ಸುದ್ದಿ ಮಾಡುತ್ತಿರುವ ಚಿತ್ರಸಂತೆಗೆ ಗಂಟುಮೂಟೆ ಕಟ್ಟಿಕೊಂಡು ಕಲಾಕೃತಿಗಳನ್ನು ಹೊತ್ತು ತರುವ ಕಲಾವಿದರ ಸಂಖ್ಯೆ ಒಂದು ಸಾವಿರಕ್ಕೂ ಹೆಚ್ಚು.

ಮಾಗಿಯ ಚಳಿಯಲ್ಲಿ ಬೆಚ್ಚನೆಯ ಅನುಭೂತಿ ಕೊಡುವ ಚಿತ್ರಸಂತೆ ಈಗೀಗ ಬೆಂಗಳೂರಿನ ಕುಮಾರಕೃಪದ ಒಂದೂಕಾಲು ಕಿಲೋಮೀಟರ್ ಉದ್ದದ ರಸ್ತೆಯುದ್ದಕ್ಕೂ ಅಲ್ಲದೆ, ಆ ರಸ್ತೆಗೆ ಹೊಂದಿಕೊಂಡ ಪುಟ್ಟ ಹಾದಿಗಳಲ್ಲೂ ಅನಾವರಣಗೊಳ್ಳುತ್ತಿದೆ. ರಂಗುರಂಗಿನ ಚಿತ್ರಕಲಾ ಲೋಕದಲ್ಲಿ ವಿಹರಿಸಲೆಂದು ಸಹೃದಯರು ಸಾವಿರ ಸಾವಿರ ಸಂಖ್ಯೆಯಲ್ಲಿ ನೆರೆಯುತ್ತಾರೆ. ಸಹೃದಯರು ಮತ್ತು ಕಲಾವಿದರ ಭೇಟಿಗೆ ಅವಕಾಶ ಕಲ್ಪಿಸುವ ಈ ಸಂತೆ, ಕಲಾವಿದರಿಗೆ ತಮ್ಮ ಕಲಾಕೃತಿಗಳನ್ನು ಮಾರುವ ಪೇಟೆಯೂ ಹೌದು.





‘ಕಲೆ ಎಲ್ಲರಿಗೂ ತಲುಪಬೇಕೆನ್ನುವ ಮುಖ್ಯ ಉದ್ದೇಶದಿಂದ ಚಿತ್ರಕಲಾ ಪರಿಷತ್ತು ವರ್ಷಕ್ಕೊಮ್ಮೆ ಆಯೋಜಿಸುವ ಚಿತ್ರಸಂತೆ ನೈಜ ಕಲಾ ಸಿರಿಯಾನ’ ಎನ್ನುವುದು ಚಿತ್ರಕಲಾ ಪರಿಷತ್ತಿನ ಅಧ್ಯಕ್ಷರಾದ ಬಿ.ಎಲ್. ಶಂಕರ್ ಅವರ ಅಭಿಮತ. ‘ಹಿರಿಯ ಕಲಾವಿದರಿಗೆ ತಮ್ಮ ಕಲೆಯ ಅನಾವರಣ, ಕಿರಿಯರಿಗೆ ಭರವಸೆಯ ಕಿರಣ’ ಎಂದೂ ಚಿತ್ರಸಂತೆಯನ್ನು ಶಂಕರ್ ವಿಶ್ಲೇಷಿಸುತ್ತಾರೆ.

ಕಲಾಕೃತಿಗಳು ಮಾತ್ರವಲ್ಲ, ಕಲೆಗೆ ಸಂಬಂಧಿಸಿದ ಪುಸ್ತಕಗಳು, ಪ್ರಸಿದ್ಧ ಕಲಾವಿದರ ಕಲಾಕೃತಿಗಳ ಪ್ರಿಂಟ್‌ಗಳೂ ಸಂತೆಯಲ್ಲಿ ಲಭ್ಯ. ಗ್ಯಾಲರಿಗಳಲ್ಲಿ ಇರುವ ಕಲಾವಿದರೊಂದಿಗೆ ಸಹೃದಯರು ಸಂವಾದ ನಡೆಸಲಿಕ್ಕೂ ಇದೊಂದು ಅವಕಾಶ. ಜನವರಿ 8ರ ಭಾನುವಾರ 2023ರ ಚಿತ್ರಸಂತೆ ನಡೆಯಲಿದೆ. ಅದರ ಮೂಲಕ, ವರ್ಷದ ಆರಂಭದಲ್ಲಿ, ಕಲಾಲೋಕದಲ್ಲಿ ವಿಹರಿಸಲೊಂದು ಅಪೂರ್ವ ಅವಕಾಶ ದೊರೆಯಲಿದೆ.

ಪ್ರತಿಕ್ರಿಯಿಸಿ: feedback@sudha.co.in